# Press Release of Russia-India-China Foreign Ministers

September 10, 2020

---

**ರಷ್ಯಾ-ಭಾರತ-ಚೀನಾ ವಿದೇಶಾಂಗ ಮಂತ್ರಿಗಳ ಪತ್ರಿಕಾ ಪ್ರಕಟಣೆ**

ಸೆಪ್ಟೆಂಬರ್ 10, 2020

ರಷ್ಯಾದ ವಿದೇಶಾಂಗ ಸಚಿವ ಶ್ರೀ ಸೆರ್ಗೆ ಲವ್ರೊವ್, ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್. ಜೈಶಂಕರ್ ಮತ್ತು ರಾಜ್ಯ ಕೌನ್ಸಿಲರ್ / ಚೀನಾದ ವಿದೇಶಾಂಗ ಸಚಿವ ಶ್ರೀ ವಾಂಗ್ ಯಿ ರವರು 10 ಸೆಪ್ಟೆಂಬರ್ 2020 ರಂದು ಮಾಸ್ಕೋದಲ್ಲಿ ಭೇಟಿಯಾದರು.

ಪರಸ್ಪರ ತಿಳುವಳಿಕೆ, ಸ್ನೇಹ ಮತ್ತು ವಿಶ್ವಾಸದ ಸ್ಫೂರ್ತಿಯಲ್ಲಿ ರಷ್ಯಾ-ಭಾರತ-ಚೀನಾ ತ್ರಿಪಕ್ಷೀಯ ಸಹಕಾರವನ್ನು ಮತ್ತಷ್ಟು ಬಲಪಡಿಸುವುದರ ಜೊತೆಗೆ ಅಂತರರಾಷ್ಟ್ರೀಯ ಮತ್ತು ಪ್ರಾದೇಶಿಕ ಪ್ರಾಮುಖ್ಯತೆಯ ವಿಷಯಗಳ ಕುರಿತು ಸಚಿವರು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು. ಮೂರು ದೇಶಗಳ ಸಾಮಾನ್ಯ ಅಭಿವೃದ್ಧಿ ಮತ್ತು ಸಹಕಾರ ಜಾಗತಿಕ ಬೆಳವಣಿಗೆ, ಶಾಂತಿ ಮತ್ತು ಸ್ಥಿರತೆಯನ್ನು ಉತ್ತೇಜಿಸಲು ಅನುಕೂಲಕರವಾಗಿದೆ ಎಂದು ಸಚಿವರು ಗಮನಿಸಿದರು.

ಎರಡನೆಯ ಮಹಾಯುದ್ಧದಲ್ಲಿ ವಿಜಯದ 75ನೇ ವಾರ್ಷಿಕೋತ್ಸವ ಮತ್ತು ವಿಶ್ವಸಂಸ್ಥೆಯ ರಚನೆಯ ಸಂದರ್ಭದಲ್ಲಿ 23 ಜೂನ್ 2020 ರ ತಮ್ಮ ವಿಡಿಯೋ-ಸಮ್ಮೇಳನವನ್ನು ನೆನಪಿಸಿಕೊಂಡ ಮಂತ್ರಿಗಳು ಅಂತರ್ಗತ ಬಹುಪಕ್ಷೀಯತೆ ಮತ್ತು ಅಂತರರಾಷ್ಟ್ರೀಯ ಕಾನೂನಿನ ಸಾರ್ವತ್ರಿಕವಾಗಿ ಗುರುತಿಸಲ್ಪಟ್ಟ ತತ್ವಗಳಿಗೆ ಗೌರವವನ್ನು ಬೆಂಬಲಿಸಿದರು.

ಆರ್‌ಐಸಿ ಚೌಕಟ್ಟಿನಡಿಯಲ್ಲಿ ನಡೆಯುವ ಜಂಟಿ ಚಟುವಟಿಕೆಗಳ ಮುಂದುವರಿಕೆ, 2019 ರ ಆಗಸ್ಟ್‌ನಲ್ಲಿ ಭಾರತ ಆಯೋಜಿಸಿದ್ದ ಪ್ರಾದೇಶಿಕ ಸಮಸ್ಯೆಗಳ ಕುರಿತು 2ನೇ ಆರ್‌ಐಸಿ ಡಿಜಿ ಮಟ್ಟದ ಸಮಾಲೋಚನೆಗಳು, ಸೆಪ್ಟೆಂಬರ್ 2019 ರಲ್ಲಿ ಚೀನಾ ಆಯೋಜಿಸಿದ್ದ 17ನೇ ಆರ್‌ಐಸಿ ಅಕಾಡೆಮಿಕ್ ಎಕ್ಸ್‌ಚೇಂಜ್ ಸಮ್ಮೇಳನ, 3ನೇ ಆವೃತ್ತಿಯ 2019 ರ ಅಕ್ಟೋಬರ್‌ನಲ್ಲಿ ರಷ್ಯಾ ಆಯೋಜಿಸಿದ್ದ ಆರ್‌ಐಸಿ ಯಂಗ್ ಡಿಪ್ಲೊಮ್ಯಾಟ್ಸ್ ಕಾರ್ಯಕ್ರಮ ಮತ್ತು 8 ಸೆಪ್ಟೆಂಬರ್ 2020 ರಂದು ನಡೆದ ರಾಷ್ಟ್ರೀಯ ನೈರ್ಮಲ್ಯ ಮತ್ತು ಸಾಂಕ್ರಾಮಿಕ ಸೇವೆಗಳ ಮೊದಲ ಆನ್‌ಲೈನ್ ಸಭೆ. Covid-19 ಸಾಂಕ್ರಾಮಿಕ ರೋಗದ ಪರಿಣಾಮವನ್ನು ತಗ್ಗಿಸುವಲ್ಲಿ ಬಲವಾದ ವೈಜ್ಞಾನಿಕ ಮತ್ತು ಕೈಗಾರಿಕಾ ಸಾಮರ್ಥ್ಯ ಹೊಂದಿರುವ ಮೂರು ದೇಶಗಳು ಮಹತ್ವದ ಕೊಡುಗೆ ನೀಡಬಹುದೆಂದು ಮಂತ್ರಿಗಳು ಒಪ್ಪಿದರು.

ಆರ್‌ಐಸಿ ಅಧ್ಯಕ್ಷತೆ ಮತ್ತು ಕಳೆದ ಒಂದು ವರ್ಷದಲ್ಲಿ ಆಯೋಜಿಸಿದ್ದ ಸಭೆಗಳಿಗಾಗಿ / ಸಮ್ಮೇಳನಗಳಿಗಾಗಿ ಭಾರತದ ವಿದೇಶಾಂಗ ಸಚಿವರು ಮತ್ತು ಚೀನಾದ ವಿದೇಶಾಂಗ ಸಚಿವರು ರಷ್ಯಾ ವಿದೇಶಾಂಗ ಸಚಿವರಿಗೆ ಧನ್ಯವಾದ ಅರ್ಪಿಸಿದರು. ರಷ್ಯಾದ ವಿದೇಶಾಂಗ ಸಚಿವರು ಆರ್‌ಐಸಿಯ ಅಧ್ಯಕ್ಷತೆಯನ್ನು ಅಧಿಕೃತವಾಗಿ ಭಾರತದ ವಿದೇಶಾಂಗ ಸಚಿವರಿಗೆ ಹಸ್ತಾಂತರಿಸಿದರು.

**ನವ ದೆಹಲಿ**
**ಸೆಪ್ಟೆಂಬರ್ 10, 2020**

DISCLAIMER: This is an approximate translation. The original is available in English on MEA's website and may be referred to as the official press release.